# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 350 (444)
2. ಸದಸ್ಯರ ಹೆಸರು : ಶ್ರೀಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 10.12.2020
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿ

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | 2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಯ ಉತ್ತರ ಪತ್ರಿಕೆಗಳಲ್ಲಿ ಅಭ್ಯರ್ಥಿಗಳ ಗುರುತು ಸಿಗುವಂತೆ "ಓಂ" "ಶ್ರೀ" ಇತ್ಯಾದಿ ಚಿಹ್ನೆಗಳನ್ನು ನಮೂದಿಸಿದ ಅಭ್ಯರ್ಥಿಗಳ ಸಂಖ್ಯೆ ಎಷ್ಟು; | ಓಂ, ಶ್ರೀ ಎಂದು ಚಿಹ್ನೆಗಳನ್ನು ಯಾವುದೇ ಅಭ್ಯರ್ಥಿಗಳು ನಮೂದಿಸಿರುವುದಿಲ್ಲ. ಆದರೆ ಬೇರೆ ರೀತಿಯಲ್ಲಿ ತಮ್ಮ ಗುರುತನ್ನು ಬಹುರಂಗಪಡಿಸಿದಂತಹ 05 ಅಭ್ಯರ್ಥಿಗಳ 07 ಉತ್ತರ ಪತ್ರಿಕೆಗಳನ್ನು ಅಸಿಂಧುಗೊಳಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ. |
| ಆ) | ಕರ್ನಾಟಕ ಲೋಕಸೇವಾ ಆಯೋಗದ ಸೂಚನೆಗಳ ಪ್ರಕಾರ ಈ ರೀತಿ ಚಿಹ್ನೆಗಳನ್ನು ನಮೂದಿಸಿದ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಲು ಅನರ್ಹರಲ್ಲವೇ; ಈ ರೀತಿ ಅನರ್ಹರಾದವರ ಸಂಖ್ಯೆ ಎಷ್ಟು; ಇವರಲ್ಲಿ ಆಯ್ಕೆ ಆದವರ ಸಂಖ್ಯೆ ಎಷ್ಟು; (ಅಂತಹವರ ಹೆಸರು, ಆಯ್ಕೆಯಾದ ಹುದ್ದೆ, ವರ್ಗ ತಿಳಿಸುವುದು) | ಸದರಿ 05 ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ಅಸಿಂಧುಗೊಳಿಸಲಾದ ಕಾರಣ ಸಂದರ್ಶನಕ್ಕೆ ಅರ್ಹರಾಗಿರುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ. |
| ಇ) | ಕೆ.ಎ.ಟಿ ನ್ಯಾಯಾಲಯದ ತೀರ್ಪಿನ ಮೇಲೆ ಇವರಿಗೆ ಸಂದರ್ಶನಕ್ಕೆ ಅವಕಾಶ ಮಾಡಿ ಕೊಟ್ಟಿದಲ್ಲಿ, ಕರ್ನಾಟಕಾ ಲೋಕಸೇವಾ ಆಯೋಗದ ನಿಯಮ/ಸೂಚನೆಗಳನ್ನು ಉಲ್ಲಂಘಿಸಿದ ಕಾರಣ ಕೆ.ಎ.ಟಿ ತೀರ್ಪಿನ ಮೇಲೆ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಮೇಲ್ಮನವಿ ಸಲ್ಲಿಸಿಲ್ಲದಿರುವುದಕ್ಕೆ ಕಾರಣಗಳೇನು : (ವಿವರ ನೀಡುವುದು) | ಈ ಅಭ್ಯರ್ಥಿಗಳು ಮಾನ್ಯ ಕೆ.ಎ.ಟಿ. ಯಲ್ಲಿ ಅರ್ಜಿಯನ್ನೇ ಸಲ್ಲಿಸದಿರುವ ಕಾರಣ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಪ್ರಮೇಯವೇ ಉದ್ಭವಿಸುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ. |
| ಈ) | ಇತರೆ ಪ್ರಕರಣದಲ್ಲಿ ಅಂದರೆ, 2015ನೇ ಸಾಲಿನ ಅಭ್ಯರ್ಥಿಗಳ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ನೀಡಲು, ರಾಜ್ಯ ಮಾಹಿತಿ ಆಯೋಗ, ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪು ನೀಡಿದ್ದರೂ ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಿಲ್ಲವೇಕೆ ; ಈ ರೀತಿಯ ತಾರತ್ಯಮ ಮಾಡುತ್ತಿರುವುದು ಸರಿಯೇ ? | ಈಗಾಗಲೇ ಆಯೋಗವು ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ಪ್ರಕರಣ ಸಂಖ್ಯೆ: W.A. 491/2020 ರಲ್ಲಿ ಮೇಲನ್ಮವಿಯನ್ನು ದಾಖಲಿಸಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ. |

ಸಂಖ್ಯೆ: ಸಿಆಸುಇ 107 ಎಸ್‌ಎಸ್‌ಸಿ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ